**ಗ್ರಾಹಕ ಸೇವೆ–ಹೊರ ಸ್ಥಳದ ಮತ್ತು ಸ್ಥಳೀಯ ಚೆಕ್ಕುಗಳನ್ನು ಕೂಡಲೇ ಜಮೆ ಮಾಡುವುದು–
ಗರಿಷ್ಠ ಪರಿಮಿತಿಯ ವಿಸ್ತರಣೆ**

**ಭಾರತೀಯ ರಿಸರ್ವ್ ಬ್ಯಾಂಕು
ಕೇಂದ್ರ ಕಚೇರಿ
ಬ್ಯಾಂಕಿಂಗ್ ಕಾರ್ಯಾಚರಣೆಗಳು ಮತ್ತು ಅಭಿವೃದ್ಧಿ ಇಲಾಖೆ
ಕೇಂದ್ರ–1, ವರ್ಲ್ಡ್ ಟ್ರೇಡ್ ಸೆಂಟರ್
ಕಫೆ ಪರೇಡ್, ಕೊಲಾಬ, ಮುಂಬೈ– 400005.**

ಉಲ್ಲೇಖ: ಡಿಬಿಒಡಿ.ಸಂಖ್ಯೆ.ಲೆಗ್.ಬಿಸಿ.21/09.07.007/2002–03 ಆಗಸ್ಟ್ 23, 2002
ಎಲ್ಲ ಅನುಸೂಚಿತ ವಾಣಿಜ್ಯ ಬ್ಯಾಂಕುಗಳಿಗೆ
(ಆರ್‌ಆರ್‌ಬಿಗಳು ಮತ್ತು ಎಲ್‌ಎಬಿಗಳನ್ನು ಹೊರತುಪಡಿಸಿ)

ಮಾನ್ಯರೇ,

**ಗ್ರಾಹಕ ಸೇವೆ–ಹೊರ ಸ್ಥಳದ ಮತ್ತು ಸ್ಥಳೀಯ ಚೆಕ್ಕುಗಳನ್ನು ಕೂಡಲೇ ಜಮೆ ಮಾಡುವುದು–
ಗರಿಷ್ಠ ಪರಿಮಿತಿಯ ವಿಸ್ತರಣೆ**

ನಮ್ಮ ಸುತ್ತೋಲೆ ಡಿಬಿಒಡಿ. ಸಂಖ್ಯೆ.ಬಿಸಿ.181/09.07.007/99–2000 ದಿನಾಂಕ ಮೇ 29, 2000 ಇದನ್ನು ದಯವಿಟ್ಟು ನೋಡಿ. ಇದರಲ್ಲಿ ಗ್ರಾಹಕರು ಸಂಗ್ರಹಣೆಗಾಗಿ ಸಲ್ಲಿಸಿದ 7,500/– ರೂಪಾಯಿ ಮೌಲ್ಯದವರೆಗಿನ ಹೊರ ಸ್ಥಳದ ಮತ್ತು ಸ್ಥಳೀಯ ಚೆಕ್ಕುಗಳನ್ನು ಕೂಡಲೇ ಜಮೆ ಮಾಡುವಂತೆ ಬ್ಯಾಂಕುಗಳಿಗೆ ಸೂಚಿಸಲಾಗಿದೆ.

2. ಭಾರತೀಯ ಬ್ಯಾಂಕುಗಳ ಸಂಘವು ಮಾಡಿರುವ ಶಿಫಾರಸುಗಳನ್ನಾಧರಿಸಿ, ಭಾರತೀಯ ರಿಸರ್ವ್ ಬ್ಯಾಂಕು ಕಾಲಕಾಲಕ್ಕೆ ನೀಡಿರುವ ಚಾಲ್ತಿ ಮಾರ್ಗಸೂಚಿಗಳಿಗೆ ಒಳಪಟ್ಟು ಹೊರಸ್ಥಳದ/ಸ್ಥಳೀಯ ಚೆಕ್ಕುಗಳನ್ನು ಕೂಡಲೇ ಜಮೆ ಮಾಡುವುದಕ್ಕೆ ಈಗ ಇರುವ ಗರಿಷ್ಠ ಪರಿಮಿತಿಯಾದ 7500 ರೂಪಾಯಿಗಳನ್ನು 15,000 ರೂಪಾಯಿಗಳಿಗೆ ವಿಸ್ತರಿಸಬೇಕೆಂದು ನಿರ್ಧರಿಸಲಾಗಿದೆ ಎಂದು ನಾವು ತಿಳಿಸುತ್ತಿದ್ದೇವೆ.

3. ಪ್ರಚಲಿತ ಸೂಚನೆಗಳ ಅನ್ವಯ, ಬ್ಯಾಂಕುಗಳು, ತಮ್ಮ ಗ್ರಾಹಕರು ಸಂಗ್ರಹಣೆಗಾಗಿ ಸಲ್ಲಿಸಲಾದ ಹೊರ ಸ್ಥಳದ/ಸ್ಥಳೀಯ ಚೆಕ್ಕುಗಳ ಹಣವನ್ನು ಕೂಡಲೇ ಜಮೆ ಮಾಡುವುದಕ್ಕೆ ಈ ಮುಂದಿನ ಮಾರ್ಗಸೂಚಿಗಳನ್ನು ಪಾಲಿಸಬೇಕಾಗುತ್ತದೆ.
(೧) ಹೊರಸ್ಥಳದ ಚೆಕ್ಕುಗಳ ವಿಷಯದಲ್ಲಿ ಮಾಮೂಲಿ ಸಂಗ್ರಹಣ ಶುಲ್ಕಗಳನ್ನು ಮತ್ತು ಸ್ಥಳೀಯ ಚೆಕ್ಕುಗಳ ಸಂದರ್ಭದಲ್ಲಿ 5/– ರೂಪಾಯಿಗಳ ಶುಲ್ಕವನ್ನು ವಸೂಲಿ ಮಾಡತಕ್ಕದ್ದು.
(೨) ಬ್ಯಾಂಕು ಗ್ರಾಹಕನ ಖಾತೆಯನ್ನು ಸರಿಯಾಗಿ ನಿರ್ವಹಿಸಿರುವ ಬಗ್ಗೆ ಮನವರಿಕೆ ಮಾಡಿಕೊಳ್ಳತಕ್ಕದ್ದು.

(ಋ) ವ್ಯಕ್ತಿಗತ ಠೇವಣಿದಾರರ ಸ್ಥಾನಮಾನದ ಬಗ್ಗೆ ಅಂದರೆ ಉಳಿತಾಯ ಬ್ಯಾಂಕ್, ಚಾಲ್ತಿ ಅಥವಾ ನಗದು ಜಮೆ ಖಾತೆ, ಹೀಗೆ ಭೇದ ತೋರದೆ ಅವರೆಲ್ಲರಿಗೂ ಬ್ಯಾಂಕು ಸೌಲಭ್ಯವನ್ನು ವಿಸ್ತರಿಸತಕ್ಕದ್ದು.

(ಊ) ಸೌಲಭ್ಯ ವಿಸ್ತರಿಸುವುದಕ್ಕೆ ಬ್ಯಾಂಕು ವಿಧಿಸಬೇಕಾದ ಕನಿಷ್ಠ ಶಿಲ್ಕಿನ ಬಗ್ಗೆ ಯಾವುದೇ ಪ್ರತ್ಯೇಕ ಕಟ್ಟುಪಾಡನ್ನು ವಿಧಿಸತಕ್ಕದ್ದಲ್ಲ.

(ತ) ಈ ಸಂಬಂಧ ಬ್ಯಾಂಕುಗಳು ವಾಡಿಕೆಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಒಳಪಟ್ಟು ಬ್ಯಾಂಕಿನ ವಿಸ್ತರಣಾ ಕೌಂಟರುಗಳಲ್ಲಿ ಗ್ರಾಹಕರಿಗೆ ಈ ಸೌಲಭ್ಯವನ್ನು ಸಹಾ ಅನುಮತಿಸತಕ್ಕದ್ದು.

(ತು) ಚೆಕ್ಕನ್ನು ಕೂಡಲೇ ಜಮೆ ಮಾಡುವುದು ಮುಂಗಡದ ಮಂಜೂರಿಗೆ ಎಡೆಯಾಗುವಂತಿದ್ದಾಗ 15,000 ರೂಪಾಯಿಗಳ ಮುಖ ಬೆಲೆಯ ಅಂಥ ಚೆಕ್‌ನ ಮೇಲೆ ಬಡ್ಡಿ ವಿಧಿಸದಿರುವುದನ್ನು ಮುಂಗಡಗಳ ಮೇಲೆ ಬಡ್ಡಿ ದರಗಳನ್ನು ಕುರಿತ ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾರ್ಗದರ್ಶಕ ಸೂಚನೆಯ ಉಲ್ಲಂಘನೆಯಾಗಿ ಭಾವಿಸಲಾಗುವುದಿಲ್ಲ.

(ತು) 15000 ರೂಪಾಯಿಗೆ ಮೀರಿದ ಮುಖಬೆಲೆಯ ಸಂಲೇಖವನ್ನು ತೀರುವೆಗೆ ಸ್ವೀಕರಿಸಿದ ಮತ್ತು ಆ ಸಯಲೇಖದಿಂದ ಬಂದ ಹಣವನ್ನು ಯಾವುದೇ ರೀತಿಯಲ್ಲಿ, ಅದರ ಹಣ ವಾಸ್ತವವಾಗಿ ಪ್ರಾಪ್ತವಾದ ದಿನಾಂಕಕ್ಕೆ ಮುಂಚೆಯೇ ಖಾತೆಗೆ ಜಮೆ ಮಾಡಿದ ಸಂದರ್ಭದಲ್ಲಿ ನಿಧಿಗಳ ಖರ್ಚು ಒಳಗೊಂಡಿರುವ ಅವಧಿಗೆ ಗೊತ್ತುಪಡಿಸಿದ ದರದಲ್ಲಿ ಬಡ್ಡಿಯನ್ನು (ಬ್ಯಾಂಕು ನಿಗದಿಪಡಿಸಿದ ಮಾಮೂಲಿ ಸೇವಾ ಶುಲ್ಕಗಳ ಜೊತೆಗೆ) ಸಹ ವಿಧಿಸತಕ್ಕದ್ದು.

(ತೂ) ಚೆಕ್ಕು ಸಂದಾಯವಾಗದೆ ಹಿಂದಕ್ಕೆ ಬಂದ ಸಂದರ್ಭದಲ್ಲಿ ಬ್ಯಾಂಕಿಗೆ ಹಣ ದೊರೆಯದ ಅವಧಿಗೆ ಭಾರತೀಯ ರಿಸರ್ವ್ ಬ್ಯಾಂಕ್‌ನ ಅನ್ವಯಿಸುವ ಬಡ್ಡಿ ದರ ಮಾರ್ಗದರ್ಶಕ ಸೂಚನೆಗೆ ಅನುಗುಣವಾಗಿ ಬ್ಯಾಂಕು ಬಡ್ಡಿಯನ್ನು ವಸೂಲಿ ಮಾಡಬಹುದು.

(ಎ) ಬ್ಯಾಂಕಿಗೆ ಸಲ್ಲಿಸಿದ ಹೊರಸ್ಥಳದ ಚೆಕ್ಕನ್ನು ಜಮೆ ಮಾಡಿದ ದಿನಾಂಕ ಮತ್ತು ಅದು ವಾಪಸ್ಸಾದ ದಿನಾಂಕದ ನಡುವಿನ ಅವಧಿಗೆ ಯಾವುದೇ ಬಡ್ಡಿಯನ್ನು ಗ್ರಾಹಕನಿಗೆ ವಿಧಿಸಕೂಡದು.

(ಬಿ) ಬ್ಯಾಂಕುಗಳು ಚೆಕ್ ವಾಪಸಾದ ದಿನಾಂಕದಿಂದ, ಬ್ಯಾಂಕಿಗೆ ಹಣವನ್ನು ಮತ್ತೆ ತುಂಬಿದ ದಿನಾಂಕದವರೆಗೆ ಬಡ್ಡಿಯನ್ನು ವಿಧಿಸಬಹುದು.

(ಸಿ) ಚೆಕ್ಕನ್ನು ಉಳಿತಾಯ ಬ್ಯಾಂಕ್ ಖಾತೆಗೆ ಜಮೆ ಮಾಡಿದ್ದಲ್ಲಿ, ಚೆಕ್ ಪಾವತಿಯಾಗದೆ ವಾಪಸಾದ ಪಕ್ಷದಲ್ಲಿ, ಹಾಗೆ ಜಮೆ ಮಾಡಿದ ಹಣದ ಮೇಲೆ ಯಾವುದೇ ಬಡ್ಡಿಯನ್ನು ಸಂದಾಯ ಮಾಡುವಂತಿಲ್ಲ.

(ಫ) ಚೆಕ್‌ಗಳು ಮಾನ್ಯವಾಗದಿದ್ದ ಪಕ್ಷದಲ್ಲಿ, ಬ್ಯಾಂಕಿಗೆ ಹಣ ತುಂಬದ ಅವಧಿಗೆ ಗ್ರಾಹಕರು ಸಾಮಾನ್ಯ ದರದಲ್ಲಿ ಬಡ್ಡಿಯನ್ನು ಸಂದಾಯ ಮಾಡಬೇಕಾಗುತ್ತದೆ ಎಂಬುದಾಗಿ ಒಂದು ಸೂಚನೆಯನ್ನು ಮುದ್ರಿಸಿರುವ ವಿಭಿನ್ನ ಪೇ–ಇನ್–ಸ್ಲಿಪ್ ಜಾರಿಗೆ ತರುವ ಬಗ್ಗೆ ಬ್ಯಾಂಕುಗಳು ಪರಿಗಣಿಸಬಹುದು.

(ಥ) ಈ ಸೌಲಭ್ಯ ಲಭ್ಯವಿರುವ ಬಗ್ಗೆ ಒಂದು ನೋಟೀಸನ್ನು ಪ್ರತಿಯೊಂದು ಶಾಖೆಯಲ್ಲಿ ಎದ್ದುಕಾಣುವಂತೆ ಪ್ರದರ್ಶಿಸತಕ್ಕದ್ದು.

4. ನೀವು, ಅದರಂತೆ, ನಿಮ್ಮ ಶಾಖೆಗಳಿಗೆ ತುರ್ತು ಕ್ರಮಕ್ಕಾಗಿ ಸೂಕ್ತ ಸೂಚನೆಗಳನ್ನು ನೀಡತಕ್ಕದ್ದು.

5. ದಯವಿಟ್ಟು ಸ್ವೀಕೃತಿ ನೀಡಿ.

ತಮ್ಮ ವಿಶ್ವಾಸಿ,

(ಎಂ. ಆರ್. ಶ್ರೀನಿವಾಸನ್)
ಮುಖ್ಯ ಪ್ರಧಾನ ವ್ಯವಸ್ಥಾಪಕ–ಪ್ರಭಾರ.